# ಹಡಗು ಕಟ್ಟೆ ಕೆಲಸಗಾರರ (ನಿಯೋಜನೆ ವಿನಿಯಮನ) (ಪ್ರಮುಖ ಬಂದರುಗಳಿಗೆ ಅನ್ವಯವಾಗದಿರುವಿಕೆ) ಅಧಿನಿಯಮ, 1997

(13.02.09ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 39ನೇ ಸಂಪುಟದ 1ನೇ ಸಂಚಿಕೆಯಲ್ಲಿ 11 ರಿಂದ 12ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**


1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಹಡಗುಕಟ್ಟೆ ಕೆಲಸಗಾರರ (ನಿಯೋಜನೆ ವಿನಿಯಮನ) ಅಧಿನಿಯಮ, 1948ರ ಉಪಬಂಧಗಳು ಪ್ರಮುಖ ಬಂದರುಗಳಿಗೆ ಅನ್ವಯವಾಗದಿರುವುದು
4. ಹಡಗುಕಟ್ಟೆ ಕಾರ್ಮಿಕ ಮಂಡಳಿಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳು, ಇತ್ಯಾದಿಗಳನ್ನು ಮಂಡಳಿಗೆ ವರ್ಗಾಯಿಸುವುದು

# ಹಡಗು ಕಟ್ಟೆ ಕೆಲಸಗಾರರ (ನಿಯೋಜನೆ ವಿನಿಯಮನ) (ಪ್ರಮುಖ ಬಂದರುಗಳಿಗೆ ಅನ್ವಯವಾಗದಿರುವಿಕೆ) ಅಧಿನಿಯಮ, 1997

**(1997ರ ಅಧಿನಿಯಮ ಸಂಖ್ಯೆ 31)**

**[18ನೇ ಆಗಸ್ಟ್, 1997]**

ಪ್ರಮುಖ ಬಂದರು ಟ್ರಸ್ಟುಗಳ ಹಡಗುಕಟ್ಟೆ ಕೆಲಸಗಾರರಿಗೆ ಹಡಗುಕಟ್ಟೆ ಕೆಲಸಗಾರರ (ನಿಯೋಜನೆ ವಿನಿಯಮನ) ಅಧಿನಿಯಮ, 1948ನ್ನು ಅನ್ವಯಗೊಳಿಸದಿರಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವ ಅಧಿನಿಯಮ.

ಇದು ಭಾರತ ಗಣರಾಜ್ಯದ ನಲವತ್ತೆಂಟನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಹಡಗುಕಟ್ಟೆ ಕೆಲಸಗಾರರ (ನಿಯೋಜನೆ ವಿನಿಯಮನ) (ಪ್ರಮುಖ ಬಂದರುಗಳಿಗೆ ಅನ್ವಯವಾಗದಿರುವಿಕೆ) ಅಧಿನಿಯಮ, 1997 ಎಂದು ಕರೆಯತಕ್ಕದ್ದು.

(2) ಇದು ಕೇಂದ್ರ ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು* ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) ಪ್ರಮುಖ ಬಂದರಿಗೆ ಸಂಬಂಧಪಟ್ಟಂತೆ "ಗೊತ್ತುಪಡಿಸಿದ ದಿನ" ಎಂದರೆ ಆ ಪ್ರಮುಖ ಬಂದರಿಗಾಗಿ 3ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ದಿನಾಂಕ;

(ಬಿ) "ಮಂಡಳಿ" ಎಂಬುದು ಪ್ರಮುಖ ಬಂದರು ಟ್ರಸ್ಟುಗಳ ಅಧಿನಿಯಮ, 1963 (1963ರ 38)ರಲ್ಲಿರುವಂತೆ ಅದೇ ಅರ್ಥವನ್ನೇ ಹೊಂದಿರತಕ್ಕದ್ದು;

(ಸಿ) "ಹಡಗುಕಟ್ಟೆ ಕಾರ್ಮಿಕ ಮಂಡಳಿ" ಎಂದರೆ ಹಡಗುಕಟ್ಟೆ ಕೆಲಸಗಾರರ (ನಿಯೋಜನೆ ವಿನಿಯಮನ) ಅಧಿನಿಯಮ, 1948 (1948ರ 9)ರ 5ಎ ಪ್ರಕರಣದ ಮೇರೆಗೆ ಸ್ಥಾಪಿತವಾದ ಹಡಗುಕಟ್ಟೆ ಕಾರ್ಮಿಕ ಮಂಡಳಿ ಎಂದು ಅರ್ಥ;

(ಡಿ) "ಪ್ರಮುಖ ಬಂದರು" ಎಂಬುದು ಭಾರತೀಯ ಬಂದರುಗಳ ಅಧಿನಿಯಮ, 1908 (1908ರ 15)ರಲ್ಲಿರುವಂತೆ ಅದೇ ಅರ್ಥವನ್ನೇ ಹೊಂದಿರತಕ್ಕದ್ದು.

**3. ಹಡಗುಕಟ್ಟೆ ಕೆಲಸಗಾರರ (ನಿಯೋಜನೆ ವಿನಿಯಮನ) ಅಧಿನಿಯಮ, 1948ರ ಉಪಬಂಧಗಳು ಪ್ರಮುಖ ಬಂದರುಗಳಿಗೆ ಅನ್ವಯವಾಗದಿರುವುದು.–** ಕೇಂದ್ರ ಸರ್ಕಾರವು, ಯಾವುದೇ ಪ್ರಮುಖ ಬಂದರಿನ ಹಡಗುಕಟ್ಟೆ ಕಾರ್ಮಿಕ ಮಂಡಳಿಯ, ಅದರ ಕೆಲಸಗಾರರು ಮತ್ತು ಆ ಪ್ರಮುಖ ಬಂದರಿನ ಆಡಳಿತ ವರ್ಗದ ನಡುವೆ ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರ ಉಪಬಂಧಗಳ ಅನುಸಾರವಾಗಿ ಒಂದು ಇತ್ಯರ್ಥಕ್ಕೆ ಬಂದ ನಂತರ, ಅದು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಹಡಗುಕಟ್ಟೆ ಕೆಲಸಗಾರರ (ನಿಯೋಜನೆ ವಿನಿಯಮನ) ಅಧಿನಿಯಮ, 1948 (1948ರ 9)ರ ಉಪಬಂಧಗಳು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಆ ಪ್ರಮುಖ ಬಂದರಿನ ಸಂಬಂಧದಲ್ಲಿ ಜಾರಿಯಲ್ಲಿರುವುದು ನಿಂತುಹೋಗತಕ್ಕದ್ದೆಂದು ನಿರ್ದೇಶಿಸಬಹುದು.

---

* ದಿನಾಂಕ 5.1.1998ರಿಂದ ಜಾರಿಗೆ ಬಂದಿದೆ, ಎಸ್.ಓ.22(ಇ), ದಿನಾಂಕ: 5.1.1998ನ್ನು ನೋಡಿ.

**4. ಹಡಗುಕಟ್ಟೆ ಕಾರ್ಮಿಕ ಮಂಡಳಿಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳು, ಇತ್ಯಾದಿಗಳನ್ನು ಮಂಡಳಿಗೆ ವರ್ಗಾಯಿಸುವುದು.–** (1) ಪ್ರಮುಖ ಬಂದರಿನ ಸಂಬಂಧದಲ್ಲಿ ಗೊತ್ತುಪಡಿಸಲಾದ ದಿನದಂದು,–

(ಎ) ಅಂಥ ದಿನದ ನಿಕಟಪೂರ್ವದಲ್ಲಿ ಹಡಗುಕಟ್ಟೆ ಕಾರ್ಮಿಕ ಮಂಡಳಿಯಲ್ಲಿ ನಿಹಿತವಾಗಿದ್ದ ಎಲ್ಲಾ ಸ್ವತ್ತು, ಆಸ್ತಿಗಳು ಮತ್ತು ನಿಧಿಗಳು ಮಂಡಳಿಯಲ್ಲಿ ನಿಹಿತವಾಗತಕ್ಕದ್ದು;

(ಬಿ) ಹಡಗು ಕಟ್ಟೆ ಕಾರ್ಮಿಕ ಮಂಡಳಿಯ ಉದ್ದೇಶಗಳಿಗಾಗಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಅಂಥ ದಿನದ ನಿಕಟಪೂರ್ವದಲ್ಲಿ ಹಡಗುಕಟ್ಟೆ ಕಾರ್ಮಿಕ ಮಂಡಳಿಯಿಂದ, ಅದರೊಡನೆ ಅಥವಾ ಅದಕ್ಕಾಗಿ ವಹಿಸಿದ ಎಲ್ಲಾ ಋಣಗಳನ್ನು, ಬಾಧ್ಯತೆಗಳನ್ನು ಮತ್ತು ಹೊಣೆಗಾರಿಕೆಗಳನ್ನು, ಮಾಡಿಕೊಂಡ ಎಲ್ಲಾ ಕರಾರುಗಳನ್ನು ಮತ್ತು ಮಾಡಲು ತೊಡಗಬೇಕಾದ ಎಲ್ಲಾ ವಿಷಯಗಳನ್ನು ಮತ್ತು ಕಾರ್ಯಗಳನ್ನು ಮಂಡಳಿಯಿಂದ, ಅದರೊಡನೆ ಅಥವಾ ಅದಕ್ಕಾಗಿ ಮಾಡಿಕೊಳ್ಳಲಾದುದೆಂದು ಮತ್ತು ಮಾಡಲು ತೊಡಗಲಾಗಿದೆ ಎಂದು ಭಾವಿಸತಕ್ಕದ್ದು;

(ಸಿ) ಅಂಥ ದಿನದ ನಿಕಟಪೂರ್ವದಲ್ಲಿ ಹಡಗುಕಟ್ಟೆ ಕಾರ್ಮಿಕ ಮಂಡಳಿಗೆ ಬರಬೇಕಾದ ಹಣದ ಎಲ್ಲಾ ಮೊತ್ತಗಳು ಮಂಡಳಿಗೆ ಬರಬೇಕಾದ ಮೊತ್ತಗಳು ಎಂಬುದಾಗಿ ಭಾವಿಸತಕ್ಕದ್ದು;

(ಡಿ) ಹಡಗುಕಟ್ಟೆ ಕಾರ್ಮಿಕ ಮಂಡಳಿಗೆ ಸಂಬಂಧಪಟ್ಟಂತೆ ಯಾವುದೇ ವಿಷಯಕ್ಕಾಗಿ ಅಂಥ ದಿನದ ನಿಕಟಪೂರ್ವದಲ್ಲಿ ಹಡಗುಕಟ್ಟೆ ಕಾರ್ಮಿಕ ಮಂಡಳಿಯು ಅಥವಾ ಅದರ ವಿರುದ್ಧ ಹೂಡಲಾದ ಎಲ್ಲ ದಾವೆಗಳನ್ನು ಮತ್ತು ಇತರ ಕಾನೂನು ವ್ಯವಹರಣೆಗಳನ್ನು ಮಂಡಳಿಯು ಮುಂದುವರೆಸಬಹುದು ಅಥವಾ ಅದರ ವಿರುದ್ಧ ಮುಂದುವರಿಸಬಹುದು;

(ಇ) ಹಡಗುಕಟ್ಟೆ ಕಾರ್ಮಿಕ ಮಂಡಳಿಯ ಅಧೀನದಲ್ಲಿ ಸೇವೆ ಸಲ್ಲಿಸುತ್ತಿರುವ ಪ್ರತಿಯೊಬ್ಬ ನೌಕರನು ಮತ್ತು ಕೆಲಸಗಾರನು, ಮಂಡಳಿಗೆ ಅವನ ಸೇವೆಯನ್ನು ವರ್ಗಾವಣೆ ಮಾಡಿರದಿದ್ದರೆ ಅವನಿಗೆ ಅನುಮತಿಸಬಹುದಾದುದಕ್ಕಿಂತ ಕಡಿಮೆ ಅನುಕೂಲಕರವಾಗಿರದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮಂಡಳಿಯಲ್ಲಿ ಪದಧಾರಣ ಮಾಡತಕ್ಕದ್ದು ಅಥವಾ ಸೇವೆಯಲ್ಲಿರತಕ್ಕದ್ದು ಮತ್ತು ಮಂಡಳಿಯಲ್ಲಿ ಅವನ ನಿಯೋಜನೆಯನ್ನು ಕ್ರಮಬದ್ಧವಾಗಿ ತೆಗೆದು ಹಾಕಿದ ಹೊರತು ಮತ್ತು ಅಲ್ಲಿಯವರೆಗೆ ಅಥವಾ ಮಂಡಳಿಯು ಅವನ ಸೇವಾ ಅವಧಿ, ಪರಿಶ್ರಮಧನ ಅಥವಾ ಸೇವಾ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಕ್ರಮಬದ್ಧವಾಗಿ ಬದಲಾಯಿಸುವವರೆಗೆ ಹಾಗೆ ಇರುವುದು ಮುಂದುವರಿಯತಕ್ಕದ್ದು.

(2) ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14)ರಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಪ್ರಕರಣದ ಮೇರೆಗೆ, ಯಾರೇ ನೌಕರನ ಸೇವೆಯನ್ನು ಮಂಡಳಿಗೆ ವರ್ಗಾಯಿಸಿದಾಗ ಅಂಥ ನೌಕರನು ಈ ಅಧಿನಿಯಮದ ಅಥವಾ ಯಾವುದೇ ಇತರೆ ಕಾನೂನಿನ ಮೇರೆಗೆ ಯಾವುದೇ ನಷ್ಟ ಪರಿಹಾರಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ, ಮತ್ತು ಯಾವುದೇ ನ್ಯಾಯಾಲಯವು, ನ್ಯಾಯಾಧಿಕರಣವು ಅಥವಾ ಇತರ ಪ್ರಾಧಿಕಾರವು ಅಂಥ ಯಾವುದೇ ಕ್ಲೇಮನ್ನು ಪುರಸ್ಕರಿಸತಕ್ಕದ್ದಲ್ಲ.

* * *